ದಿನಾಂಕ 07-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ ಶ್ರೀ. ಎನ್. ಕೆ. ಡಿ. ಪ್ರತಿವಾದಿ ಪರ ವಕೀಲರಿಂದಃ-**

1. ವಾದಿಯೂ ದಾವೆಯನ್ನು ಅಜ್ಜಪ್ಪ ಮತ್ತು ಅವರ ಮಕ್ಕಳ ಮೇಲೆ ಹೂಡಿರುತ್ತಾರೆ. ಅವರ ಮಕ್ಕಳ ಹೆಸರು ಕರಗಪ್ಪ ಮತ್ತು ನಾರಾಯಣಸ್ವಾಮಿ. ಕರಗಪ್ಪ ರವರು ಜೀವಂತವಾಗಿ ಇಲ್ಲ. ನಿಪಿ 1 ರಲ್ಲಿ ನನ್ನ ಹೆಸರು ಮತ್ತು ನನ್ನ ತಂದೆಯ ಹೆಸರು ಬರೆದಿದ್ದಾರೆ ಉಳಿದ ವಿವರಗಳು ಬರೆದಿಲ್ಲ. ಪ್ರತಿವಾದಿಯೂ ಕಂಗಾನಹಳ್ಳಿಯಲ್ಲಿ ವಾಸವಿದ್ದರು. ಆ ಹಳ್ಳಿಗೆ ಬಂದು ಹೋಗುವುದು ಮಾಡುತ್ತಿದ್ದರು.

2. ನಾನು ವ್ಯವಸಾಯ ಮಾಡುತ್ತೇನೆ. ನಾನು ಹುಲ್ಲಪ್ಪನಹಳ್ಳಿ, ಯರ್ರ ಹನುಮಂತಪ್ಪನ ಮಗ ಶ್ರೀರಾಮ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರು ಮಾಡಿಲ್ಲ.

3. ನಾನು ದಾವಾ ಸ್ವತ್ತನ್ನು ನೋಡಿದ್ದೇನೆ. ಅದರ ಸರ್ವೆ ನಂ.81/36 ವಿಸ್ತೀರ್ಣ 2 ಎಕರೆ. ನನಗೆ ಚೆಕ್ಕುಬಂದಿ ಹೇಳು ಆಗುತ್ತದೆ. ಪೂರ್ವಕ್ಕೆ ಸರ್ಕಾರಿ ರಸ್ತೆ ಪಶ್ಚಿಮಕ್ಕೆ ತಲಾರಿ ವೆಂಕಟರಾಯಪ್ಪ ನವರ ಜಮೀನು, ಉತ್ತರಕ್ಕೆ ಸಿಂಗಪ್ಪ ನವರ ಜಮೀನು ಮತ್ತು ದಕ್ಷಿಣಕ್ಕೆ ಶ್ರೀನಿವಾಸಪ್ಪ ಮತ್ತು ಚರ್ಚ್‌ಪಾಧರ್ ಇರುತ್ತಾರೆ.

4. ವಾದಿ ಮತ್ತು ಪ್ರತಿವಾದಿಯವರು ಅವರು ಪರಸ್ಪರ ಭೇಟಿ ಅಗಿರುವುದು ನಾನು ನೋಡಿರುತ್ತೇನೆ. ದಿಃ 21-08-2002 ರಲ್ಲಿ ಭೇಟಿ ಆಗಿದ್ದರು. ಈ ದಿನಾಂಕದ 10 ದಿವಸದ ಮುಂಚೆ ಅವರು ಕೈವಾರ ಕ್ರಾಸ್ ನಲ್ಲಿ ಸೇರಿದ್ದರು. ಆ ದಿನ ವಾದಿ ಪ್ರತಿವಾದಿಯರು, ಪ್ರತಿವಾದಿಯವರು ಮಕ್ಕಳು, ನಾನು ಮತ್ತು ಮುನಿವೆಂಕಟಪ್ಪ, ನಾರಾಯಣಪ್ಪ ಮತ್ತು

ವೆಂಕಟರಾಯಪ್ಪ ಇದ್ದೇವು. ಕೈವಾರ ಕ್ರಾಸ್ ಗೆ ಬೆಳಗ್ಗೆ 10.30 –11.00 ಗಂಟೆಗೆ ಸೇರಿದೆವು. ಆ ದಿನ ಜಮೀನಿನ ವಿಷಯವಾಗಿ ಸೇರಿದ್ದೆವು. ಆ ದಿನ ವಾದಿಗೆ ರೂ.5,000 /– ವನ್ನು 1 ನೇ ಪ್ರತಿವಾದಿಯವರು ಕೊಟ್ಟಿರುತ್ತಾರೆ. ಆ ದಿನ ಯಾವುದೇ ದಾಖಲೆ ಬರೆದುಕೊಳ್ಳಲಿಲ್ಲ, 10 ದಿನದ ನಂತರ ಸಬ್ ರಿಜಿಸ್ಟರ್ ಕಚೇರಿಯಲ್ಲಿ ದಾಖಲೆ ಮಾಡಿಕೊಂಡರು. ನಾನು ವೆಂಕಟರಾಯಪ್ಪ, ಮುನಿವೆಂಕಟಪ್ಪ , ನಾರಾಯಣಪ್ಪ , ವಾದಿ ಮತ್ತು ಪ್ರತಿವಾದಿಯರು ಸಬ್ ರಿಜಿಸ್ಟರ್ ಕಚೇರಿಯಲ್ಲಿ ಸೇರಿದೆವು. ವಾದಿಯ ಮಗ ಮಂಜುನಾಥ ಬಂದಿದ್ದ ಎಂದರೆ ಸರಿ. ಸಬ್ ರಿಜಿಸ್ಟರ್ ಕಚೇರಿಗೆ ಹೋದಾಗ ಸುಮಾರು ಮಧ್ಯಾಹ್ನ 12.30 – 1.00 ಗಂಟೆ ಆಗಿತ್ತು. ಪ್ರತಿವಾದಿ ಮತ್ತು ಅವರ ಮಕ್ಕಳು ಜಮೀನನ್ನು ಮಾರುತ್ತಿದ್ದರು. ಆ ವಿಚಾರವಾಗಿ ಸ್ಟಾಂಪ್ ವೆಂಡರ್ ನ್ನು ಭೇಟಿ ಮಾಡಿದರು. ದಾಖಲೆಗೆ ಬೇಕಾದ ಹಾಳೆಗಳನ್ನು ರೂ 50 ರೂಪಾಯಿಗೆ ಪ್ರತಿವಾದಿಯೇ ತಂದಿದ್ದರು. ಕರಾರು ಪತ್ರ ಆದ ದಿವಸವೇ ದಾಖಲೆಗೆ ಬೇಕಾದ ಛಾಪಾ ಕಾಗದಗಳನ್ನು ತಂದಿದ್ದರು. ಯಾರ ಹತ್ತಿರ ತೆಗೆದುಕೊಂಡು ಬಂದರು ಎಂದರೆ ನನಗೆ ಗೊತ್ತಿಲ್ಲ, ನಾನು ನೋಡಿಲ್ಲ.

5. ನಿಪಿ 1 ರಲ್ಲಿ ಹಣದ ವ್ಯವಹಾರ ಯಾವ ರೀತಿ ಆಗಿದೆ ಎಂದು ನನಗೆ ಗೊತ್ತು. ಕರಾರು ಮಾಡುವ ದಿನ ಬೇರೆ ಯಾವ ದಾಖಲೆಗಳನ್ನು ತೆಗೆದುಕೊಂಡು ಬಂದರು ನಾನು ನೋಡಿಲ್ಲ. ಕರಾರು ಪತ್ರವನ್ನು ಸಬ್ ರಿಜಿಸ್ಟರ್ ಕಚೇರಿಯಲ್ಲಿ ತಯಾರು ಮಾಡಿರುತ್ತಾರೆ ಎಂದರೆ ಸರಿ. ಕರಾರು ಪತ್ರವನ್ನು ಬೆರಳಚ್ಚು ಮೂಲಕ ಸ್ಟಾಂಪ್ ವೆಂಡರ್ ತಯಾರು ಮಾಡಿರುತ್ತಾರೆ. ಕರಾರು ಪತ್ರ ತಯಾರು ಮಾಡುವ ಕಾಲಕ್ಕೆ ಮಧ್ಯಾಹ್ನ ಸುಮಾರು 3.00 ಗಂಟೆ ಆಗಿತ್ತು. ದುಡ್ಡು ಯಾವಾಗ ಕೊಟ್ಟರು ಎಂದರೆ ಸಾಕ್ಷಿಯು ಕರಾರು ಪತ್ರ ತಯಾರು ಆದ ನಂತರ ಸಹಿ ಮಾಡಬೇಕಾದರು ಹಣವನ್ನು ನೀಡಿದರು. ನನಗೆ ಕರಾರು ಪತ್ರದ ವಿಚಾರವನ್ನು ಸ್ಟಾಂಪ್ ವೆಂಡರ್

ಓದಿ ತಿಳಿಸಿರುತ್ತಾರೆ ಎಂದರೆ ಸರಿ. ಆ ದಿನ ಸ್ಟಾಂಪ್ ವೆಂಡರ್ ಎಷ್ಟು ಕರಾರು ಪತ್ರ ತಯಾರು ಮಾಡಿದರು ಎಂದರೆ ಎರಡು ಕರಾರು ಪತ್ರವನ್ನು ತಾಯಾರು ಮಾಡಿರುತ್ತಾರೆ.

6. 1 ನೇ ಪ್ರತವಾದಿ ವಾದಿಗೆ Power of Attorney ಮಾಡಿಕೊಟ್ಟರು ಎಂದರೆ ಸರಿ. ಕರಾರು ಪತ್ರದಲ್ಲಿ ಏನಾದರೂ ಷರುತ್ತಗಳನ್ನು ಬರೆದಿದ್ದಾರ ಎಂದರೆ ಸರಿ. ಅದೇನೆಂದರೆ ಕರಾರು ಪತ್ರದಲ್ಲಿ ದಾವಾ ಸ್ವತ್ತನ್ನು 15 ವರ್ಷ ಪರಭಾರೆ ಮಾಡಬಾರದು ಎಂದು ಬರೆಸಿರುತ್ತಾರೆ. 2008 ಕ್ಕೆ ಷರತ್ತು ಕಾಲ ಮುಗಿಯುತ್ತದೆ, ತದನಂತರ ಮಾಡಿಕೊಡುತ್ತೇವೆ ಎಂದು ಪ್ರತಿವಾದಿಯವರು ಬರೆಯಿಸಿರುತ್ತಾರೆ.

7. ನಿಪಿ –1 ಕ್ಕೆ ನಾನು ತಾಲ್ಲೂಕು ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ. ಅಂದರೆ ಸಬ್ ರಿಜಿಸ್ಟರ್ ಕಚೇರಿಯಲ್ಲಿ ಎಂದರೆ ಸರಿ. ಆ ದಿನ ಪತ್ರವನ್ನು ನೊಂದಾಯಿಸಿದರಾ ಎಂದರೆ ಹೌದು ನೊಂದಾಯಿಸಿರುತ್ತಾರೆ.

8. ನಾನು ಯಾವಾಗಾದರೂ ಅಂಬೇಡ್ಕರ್ ಭವನದ ಪಕ್ಕ ಸಹಿ ಏನಾದರೂ ಮಾಡಿದ್ದೀರಾ ಎಂದರೆ ನಾನು ಮಾಡಿಲ್ಲ. ನಿಪಿ 1 ಕ್ಕೆ ಮೊದಲು ನಾರಾಯಣಪ್ಪ ಸಹಿ ಮಾಡಿರುತ್ತಾರೆ. ನಾರಾಯಣಪ್ಪ ಸಹಿ ಮಾಡುವಾಗ ನಾನು ಪಕ್ಕದಲ್ಲಿ ಇದ್ದೆ. ಮಿಕ್ಕಿದ ಮೂರು ಸಾಕ್ಷಿಗಳು ನನ್ನ ಪಕ್ಕದಲ್ಲಿ ಸಬ್ ರಿಜಿಸ್ಟರ್ ಕಚೇರಿಯಲ್ಲಿ ಇದ್ದರು. ನಾರಾಯಣಪ್ಪ ರವರು ಸಹಿ ಮಾಡುವುದು ವಾದಿ ಮತ್ತು ಪ್ರತಿವಾದಿಯವರು ಖುದ್ದಾಗಿ ನೋಡಿದರಾ ಎಂದರೆ ಹೌದು ನೋಡಿದರು. ನಿಪಿ 1 ಕ್ಕೆ 2 ನೇ ಸಹಿಯನ್ನು ಶ್ರೀರಾಮಪ್ಪ ಮಾಡಿರುತ್ತಾನೆ. ನಾನು ಮಾಡಿದ ಸಹಿಯನ್ನು ಖುದ್ದಾಗಿ ಯಾರು ನೋಡಿದರು ಎಂದರೆ ನನ್ನ ಪಕ್ಕದಲ್ಲಿರುವವರು ನೋಡಿರುತ್ತಾರೆ.

ಸಬ್ ರಿಜಿಸ್ಟರ್ ಕಚೇರಿಯಲ್ಲಿ ನಾವೆಲ್ಲರೂ ನಿಂತುಕೊಂಡೇ ಇದ್ದೆವು. ನಂತರ ನಿಪಿ 1 ಕ್ಕೆ ಮುನಿವೆಂಕಟಪ್ಪ ರವರು ಸಹಿ ಹಾಕಿದರು.

9. ನಿಪಿ 1 ಕ್ಕೆ ಸಹಿ ಹಾಕಿದ ನಂತರ ಸ್ಟಾಂಪ್ ವೆಂಡರ್ ಗೆ ಪತ್ರಗಳನ್ನು ಕೊಟ್ಟು ನಾವು ಆಚೆ ಬಂದು ಕೂತಿದ್ದೇವು. ನಂತರ ವಾದಿ ಪ್ರತಿವಾದಿಯವರು ನನ್ನ ಮುಂದೆ ಸಹಿಯನ್ನು ಹಾಕಿದರು ನಾನು ನೋಡಿರುತ್ತೇನೆ. ವಾದಿ ಪ್ರತಿವಾದಿಯವರು ಸಹಿ ಹಾಕಿದ ನಂತರ ನಾವು ಸಾಕ್ಷಿಗಳ ಸಹಿ ಹಾಕಿದೇವು.

10. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ವಾದಿಯೂ ಸ್ವಾಧೀನದಲ್ಲಿದ್ದಾರೆ ಎನ್ನುತ್ತಾರೆ. ಪ್ರತಿವಾದಿಯರು ಎಷ್ಟು ಪತ್ರಗಳಿಗೆ ಸಹಿ ಹಾಕಿದರು ಎಂದರೆ ಎಷ್ಟು ಅವಶ್ಯಕತೆ ಇದೆಯೋ ಅಷ್ಟು ಪತ್ರಗಳಿಗೆ ಸಹಿ ಹಾಕಿರುತ್ತಾರೆ. ನಮ್ಮ ಎಲ್ಲರ ಸಹಿಗಳನ್ನು ಯಾರು ಮಾಡಿಸಿದರು ಎಂದರೆ ಸ್ವಾಂಪ್ ವೆಂಡರ್ ಮಾಡಿದಸಿದರು.

11. ವಾದಿಯ ಮಗ ಮಂಜುನಾಥ ರವರು ನನಗೆ ಸಾಕ್ಷಿ ಹೇಳಲು ಕರೆದುಕೊಂಡು ಬಂದಿದ್ದಾರೆ ಎಂದರೆ ಆವತ್ತು ನಾವು ಸಾಕ್ಷಿ ಸಹಿ ಹಾಕಿದ್ದೇವೆ ಆದ್ದರಿಂದ ಇವತ್ತು ಕರೆದುಕೊಂಡು ಬಂದಿದ್ದಾರೆ. ವಾದಿಯೂ ಇದೇ ರೀತಿ ಸಾಕ್ಷಿ ಹೇಳಬೇಕು ಎಂದು ಹೇಳಿಕೊಟ್ಟರು ಎಂದರೆ ಸರಿಯಲ್ಲ.

12. ನಾನು ನ್ಯಾಯಾಲಯದ ಮುಂದೆ ಪ್ರಮಾಣ ಪತ್ರವನ್ನು ಹಾಕಿದ್ದೀರಾ ಎಂದರೆ ನಾನು ಏನಕ್ಕೆ ಹಾಕಲಿ ಎಂದು ನುಡಿದು, ನಂತರ ಮುಂದುವರೆದು ಜಮೀನಿನ ವಿಷಯವಾಗಿ ಹಾಕಿರುತ್ತೇನೆ. ಪ್ರಮಾಣ ಪತ್ರವನ್ನು ಆಂಗ್ಲ ಭಾಷೆಯಲ್ಲಿ ಬರೆದಿತ್ತಾರೆ.

13. ನನಗೆ ಮತ್ತು ವಾದಿಗೆ ಬಹಳ ವಿಶ್ವಾಸ ಇದೆ ಎಂದರೆ ಅಷ್ಟು ಇಲ್ಲ ಪರಿಚಯವಿದೆ. ನಾನು ಹೇಳಿದ ದಿನಾಂಕದಂದು ಯಾವುದೇ ಕರಾರು ಪತ್ರ ಮಾಡಿಸಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2002 ರಲ್ಲಿ ಕರಗಪ್ಪ ರವರು ತೀರಿಕೊಂಡಿದ್ದರು ಎಂದರೆ ಇಲ್ಲ ಬದುಕಿದ್ದರು. ಪ್ರತಿವಾದಿಯರು 2 ಎಕರೆಯ ಜಮೀನನ್ನು ಕರಾರು ಮಾಡಿಕೊಟ್ಟಿರುತ್ತಾರೆ ಉಳಿದ 2 ಎಕರೆ ಅವರ ಕಡೆಯೇ ಇದೆ ಎಂದು ನನಗೆ ಗೊತ್ತಿಲ್ಲ. ವಾದಿಯೂ ಕೂಲಿ ಕೆಲಸ ಮಾಡುತ್ತಾನೆ ಎಂದರೆ ಸರಿ. ವಾದಿಯೂ ಹಣಕಾಸು ಸ್ಥಿತಿವಂತರಲ್ಲ ಎಂದರೆ ಅಷ್ಟು ಇಲ್ಲದಿದ್ದರೂ ಅವರು ಈ ಜಮೀನಿಗೆ ಕೂಲೆನಾಲಿ ಮತ್ತು ಚೀಟಿ ಮಾಡಿ ಹಣ ಇಟ್ಟುಕೊಂಡಿದ್ದರು. ದಾವಾ ಸ್ವತ್ತು 2002 ನೇ ಇಸವಿಯಲ್ಲಿ 1 ಎಕರೆ 20-25 ಲಕ್ಷ ಬೆಲೆ ಬಾಳುತ್ತದೆ ಎಂದರೆ ಇಲ್ಲ.

14. ಪ್ರತಿವಾದಿಯವರು ವಾದಿಗೆ ಜಮೀನನ್ನು ಮಾರುವ ಉದ್ದೇಶ ಇರಲಿಲ್ಲ ಹಾಗೂ ಅವರು ಮಾರಿಲ್ಲ, ವಾದಿಯರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ 1 ನಾವು ಸೃಷ್ಟಿ ಮಾಡಿದ ದಾಖಲೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.